<u>1ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ</u>
<u>ಬೆಂಗಳೂರು ನಗರ</u>

ಸಿ.ಸಿ. ನಂ. 8424-2020

ಸಿಡಬ್ಲೂ -11 ಪಿಡಬ್ಲೂ-2

| | |
|---|---|
| ಸಾಕ್ಷಿದಾರರ ಹೆಸರು | : ಉಮಾಶಂಕರ |
| ತಂದೆಯ ಹೆಸರು | : ಬಸವಶೆಟ್ಟಿ |
| ವಯಸ್ಸು | : 54 ವರ್ಷ |
| ಕೆಲಸ | : ಡಿವೈ ಎಸ್ ಪಿ |
| ವಾಸ | : ಬೆಂಗಳೂರು |

<u>ಸಾಕ್ಷಿಯನ್ನು ದಿನಾಂಕಃ 06-03-2026 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.</u>
<u>ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದಃ</u>

ನಾನು 2016 ರಿಂದ 2018 ರವರೆಗೆ ಸಿಸಿಬಿ ಎಫ್ ಆಂಡ್ ಎಂ ವಿಭಾಗದಲ್ಲಿ ಪಿಐ ಆಗಿ ಕರ್ತವ್ಯ  ನಿರ್ವಹಿಸಿರುತ್ತೇನೆ.

ದಿ. 07-09-2017 ರಂದು ಈ ಕೇಸಿನ ಕಡತವನ್ನು ಚಾಸಾ 10 ರವರಿಂದ ಪಡೆದು ಪರಿಶೀಲಿಸಿ ತನಿಖೆಯನ್ನು ಮುಂದುವರಿಸಿರುತ್ತೇನೆ. ನಂತರ ಕಡತದಲ್ಲಿ ಸ್ವೀಕರಿಸಲಾಗಿದ್ದ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ. ಅದೇ ದಿನ ನಾನು ಸಿಬ್ಬಂದಿಗಳು ಮತ್ತು ಪಂಚರ ಜೊತೆಯಲ್ಲಿ ದೂರಿನಲ್ಲಿ ನಮೂದಿಸಲಾಗಿದ್ದ ಆರೋಪಿಯ ವಿಳಾಸಕ್ಕೆ ರಾತ್ರಿ 08.30 ಗಂಟೆಗೆ ಬೇಟಿ ನೀಡಿ ನೋಡಲಾಗಿ ಅದು ನಂಜುಂಡೇಶ್ವರ ಆಟೋ ಕಂನ್ಸಲಟೆನ್ಸಿ ಕಚೇರಿ ಆಗಿತ್ತು. ನಾವು ಬೇಟಿ ನೀಡಿದ ಸಮಯದಲ್ಲಿ ಅದರ ಬಾಗಿಲು ತೆರೆದಿದ್ದು ಕಚೇರಿಯ ಒಳಭಾಗದಲ್ಲಿ ಒಬ್ಬ ವ್ಯಕ್ತಿಯು ಹಾಜರಿದ್ದು ಅವರಿಗೆ ನಮ್ಮನ್ನು ಪರಿಚಯಿಸಿದ್ದು ಬಂದ ವಿಚಾರವನ್ನು ತಿಳಿಸಿರುತ್ತೇನೆ.

ಸದರಿ ಆಸಾಮಿಯ ಬಗ್ಗೆ ವಿಚಾರ ಮಾಡಿ ಆತನು ಲೇವಾದೇವಿ ವ್ಯವಹಾರ ಮಾಡಲು ಪರವಾನಿಗೆಯನ್ನು ಪಡೆದಿರುವ ಬಗ್ಗೆ ವಿಚಾರಿಸಲಾಗಿ ಆತನು ಯಾವುದೇ ಪರವಾನಿಗೆಯನ್ನು ಪಡೆದಿಲ್ಲ ಎಂದು ತಿಳಿಸಿದ ಮೇರೆಗೆ ಆತನನ್ನು ವ್ಯವಹಾರಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸುವಂತೆ ತಿಳಿಸಿದ್ದು ಆತನು ಹಾಜರುಪಡಿಸಿದ ಸಹಿ ಮಾಡಿದ ಖಾಲಿ ಚೆಕ್ಕುಗಳು, ಸಹಿ ಮಾಡಿರುವ ಖಾಲಿ ಆನ್

ಡಿಮಾಂಡ್ ಪ್ರಾಮಿಸರಿ ನೋಟ್ ಗಳು, ಸಾಲದ ಅರ್ಜಿಗಳು, ನೊಂದಣಿ ವಹಿಗಳನ್ನು ಮುಂದಿನ ಕ್ರಮಕ್ಕಾಗಿ ಪಂಚನಾಮೆಯ ಮೂಲಕ ಅಮಾನತ್ತುಪಡಿಸಿಕೊಂಡಿರುತ್ತೇವೆ.

ಪಂಚನಾಮೆ ಮತ್ತು ಸದರಿ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಸದರಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 3 ಎಂದು ಸಾಕ್ಷಿಯ ಸಹಿಯನ್ನು ನಿಪಿ. 3 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಪಿ.ಎಫ್ ನಂ. 63/2017 ರ ಕ್ರಮಸಂಖ್ಯೆ 1 ರ 12 ಚೆಕ್ಕುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ. 4 ಎಂದು ಗುರುತಿಸಲಾಯಿತು.

ಕ್ರಮಸಂಖ್ಯೆ 2 ರ ಖಾಲಿ ಚೆಕ್ಕುಗಳು, ಸಾಲದ ಅರ್ಜಿ ನಮೂನೆಗಳು, ಆನ್ ಡಿಮಾಂಡ್ ಪ್ರಾಮೀಸರಿ ನೋಟ್ ಗಳು ಒಟ್ಟು 19 ದಾಖಲೆಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ. 5 ಎಂದು ಗುರುತಿಸಲಾಯಿತು. ಕ್ರಮಸಂಖ್ಯೆ 3 ರ ಆಧಾರ ಕಾರ್ಡಗಳು, ಡಿ. ಎಲ್ ಗಳು, ಸಾಲದ ಅರ್ಜಿ ನಮೂನೆಗಳು, ಆನ್ ಡಿಮಾಂಡ್ ಪ್ರಾಮೀಸರಿ ನೋಟ್ ಗಳು ಒಟ್ಟು 36 ದಾಖಲೆಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ. 6 ಎಂದು ಗುರುತಿಸಲಾಯಿತು. ಕ್ರಮಸಂಖ್ಯೆ 4 ರ ಸಹಿ ಮಾಡಿರುವ ಮತ್ತು ಹೆಬ್ಬೆಟ್ಟಿನ ಗುರುತು ಹಾಕಿರುವ 14 ಖಾಲಿ ಆನ್ ಡಿಮಾಂಡ್ ಪ್ರಾಮೀಸರಿ ನೋಟ್ ಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ. 7 ಎಂದು ಗುರುತಿಸಲಾಯಿತು. ಕ್ರಮಸಂಖ್ಯೆ 5 ರ 4 ನೊಂದಣಿ ವಹಿಗಳನ್ನು ಒಟ್ಟಾಗಿ ನಿಪಿ. 8 ಎಂದು ಗುರುತಿಸಲಾಯಿತು.

ನಂತರ ಪಂಚನಾಮೆ, ಮುದ್ದೆ ಮಾಲು, ಆರೋಪಿಗಳ ಜೊತೆಯಲ್ಲಿ ಠಾಣೆಗೆ ಹಿಂದಿರುಗಿ ಆರೋಪಿಯ ವಿರುದ್ಧ ದಸ್ತಗಿರಿ ಕ್ರಮ ಅನುಸರಿಸಿ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಮಾಲು ಅಮಾನತ್ತು ಪಡಿಸಿಕೊಂಡ ಬಗ್ಗೆ ಠಾಣಾ ಮಾಲುಪಟ್ಟಿಯಲ್ಲಿ ನಮೂದಿಸಿರುತ್ತೇನೆ. ಪಂಚ ಸಾಕ್ಷಿದಾರರ ಮತ್ತು ಸಿಬ್ಬಂದಿಗಳ

ಹೇಳಿಕೆಗಳನ್ನು ಪಡೆದಿರುತ್ತೇನೆ. ಈ ವೇಳೆಗಾಗಲೇ ನನಗೆ ವರ್ಗಾವಣೆ ಆದ ಕಾರಣ ಕಡತವನ್ನು ಮುಂದಿನ ತನಿಖೆಗಾಗಿ ಕೆ. ಸಿ ಗಿರಿಯವರಿಗೆ ನೀಡಿರುತ್ತೇನೆ.

ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ

ಆರೋಪಿಯ ಕಚೇರಿಗೆ ಹೋಗಿ ಬಡ್ಡಿ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಮಾಹಿತಿಯನ್ನು ಪಡೆದಿರುತ್ತೇನೆ. ಸದರಿ ಕಚೇರಿಯ ಮಾಲೀಕ ಆರೋಪಿ. ಆರೋಪಿ ಅಲ್ಲಿ ಎಷ್ಟು ವರ್ಷಗಳಿಂದ ಅಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ತನಿಖೆ ಮಾಡಿಲ್ಲ. ಆರೋಪಿ ಆ ಕಚೇರಿಯ ಮಾಲೀಕ ಎಂದು ತೋರಿಸಲು ದಾಖಲೆಯನ್ನು ಪಡೆದಿಲ್ಲ. ಸಾಕ್ಷಿಯು ಪರವಾನಿಗೆ ಇಲ್ಲಾ ಎಂದು ನುಡಿಯುತ್ತಾರೆ. ಆರೋಪಿಯು ಯಾವುದೇ ಬಡ್ಡಿ ವ್ಯವಹಾರ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ದೂರುದಾರರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ. 4 ರಿಂದ 8 ನ್ನು ಆರೋಪಿಯ ಕಡೆಯಿಂದ ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

ಓ ಹೇ ಕೇ ಸ ಇ ಒ

1 ನೇ ಅ. ಮು. ನ್ಯಾ.ದಂ. ನ್ಯಾ